★★★

ವ್ಯಾಪಾರವೇ ಇರಲಿ, ಚುನಾವಣೆಯೇ ಬರಲಿ... ಪ್ರತಿ ಬಾರಿ ತಾವು ಹೀನಾಯವಾಗಿ ಸೋತಾಗಲೆಲ್ಲ, ನಾನೆಲ್ಲಿ ಸೋತೆ? ಸೋತಿದ್ದು ನನ್ನೂರಿನ ಜನ ಪಾಪ! ಎಂದು ನಿರ್ಭಾವುಕರಾಗಿ ಹೇಳುತ್ತಿದ್ದರು ಪೈಮಾಮ್.

ಇಂತಿಪ್ಪ ಪೈಮಾಮ್‌ಗೆ ಇದ್ದಕ್ಕಿದ್ದಂತೆ ನಾಟಕದ ಹುಚ್ಚು ಹತ್ತಿಕೊಳ್ಳಬೇಕೆ! ಆಗೆಲ್ಲ ಗಾಂಧಿಪುರದಲ್ಲಿ ಬೆಳೆ ಕೊಯ್ಲು ಮುಗಿದು ದುಡ್ಡು ಕೈಗೆ ಬಂದ ಹೊತ್ತಲ್ಲಿ ನಾಟಕ, ಯಕ್ಷಗಾನಗಳ ರಂಗೇರುತ್ತಿತ್ತು. ಉಮೇದುವಾರ್ ಪೋರರೆಲ್ಲ ಗುಂಪು ಕಟ್ಟಿಕೊಂಡು ನಾಟಕ ಆಡುತ್ತಿದ್ದರು. ಅವರಲ್ಲಿ ತೆಳ್ಳಗೆ, ಬೆಳ್ಳಗೆ ಇದ್ದ ಒಂದಿಬ್ಬರು ಸ್ತ್ರೀ ಪಾತ್ರ ಮಾಡುತ್ತಿದ್ದರು.

"ಈ ಸರ್ತಿ ಶಿರಸಿ ಕಡೆಯಿಂದ ನಾಟಕ ನಟಿಯನ್ನೇ ಕರೆಸಿಬಿಡೋಣ ಪೋರಗಳಾ" ಎಂದರು ಪೈಮಾಮ್. "ಅವರಿಗೆ ದುಬಾರಿ ಕಾಸು ಕೊಡಬೇಕಲ್ಲ ಪೈಮಾಮ್" ಎಂದರು ಹುಡುಗರು. "ಅರೆ! ಅದಕ್ಕೇನು ತಮ್ಮಾ... ನಾಟಕಕ್ಕೆ ಟಿಕೆಟ್ ಇಟ್ಟರಾಯಿತು. ನಟಿಯೇ ಇದ್ದಾಳೆ ಅಂದರೆ ಚಾಪೆ ಹಿಡಿದ ಮುದುಕರೂ ಎದ್ದು ನೋಟು ಹಿಡಿದುಕೊಂಡು ಬರ್ತಾರೆ" ಎಂದು ಜೋರಾಗಿ ನಗುತ್ತ ಹಿಕಮತ್ತು ಹೇಳಿಕೊಟ್ಟರು.

ನಾಟಕ ನಿರ್ದೇಶನದ ಹೊಣೆಯನ್ನು ತಾವೇ ವಹಿಸಿದರು. ಶಿರಸಿಗೆ ಹೋಗಿ ಚೆಂದ ಮೈಮಾಟದ ನಟಿಯೊಬ್ಬಳನ್ನು ಬುಕ್ ಮಾಡಿದ್ದಾಯಿತು. "ಈ ನಾಟಕದ ಪಾತ್ರವನ್ನು ನಾನು ತುಂಬಾ ಸಲ ಮಾಡಿದ್ದೇನೆ. ಹಾಗಾಗಿ, ನಾಟಕಕ್ಕೆ ಎರಡು ದಿನಗಳ ಮೊದಲು ತಾಲೀಮಿಗೆ ಬರುತ್ತೇನೆ" ಎಂದಳಾಕೆ.

ಆರಾಮ ಕುರ್ಚಿಗೆ 10 ರೂ, ಅದರ ಹಿಂದೆ ಕಬ್ಬಿಣದ ಕುರ್ಚಿಗೆ 5 ರೂ, ಸ್ಟೇಜ್ ಮುಂದಿನ ಚಾಪೆ ಮೇಲೆ ಕೂರಲು 2 ರೂ. ಟಿಕೆಟ್ ನಿಗದಿಯಾಯಿತು. ಊರಿನ ಹಿರೀಕರಿಗೆ ಗೌರವ ಪ್ರವೇಶದ ವ್ಯವಸ್ಥೆಯೂ ಆಯಿತು. ಸ್ವತಃ ಪೈಮಾಮ್ ರಿಕ್ಷಾಗೆ ಮೈಕ್ ಕಟ್ಟಿಕೊಂಡು ಊರೂರು ಸುತ್ತಿ ಪ್ರಚಾರ ಮಾಡಿದರು. 'ಸಂಸಾರ ಸಾಗರ' ಅರ್ಥಾತ್ 'ಪತಿ ಪರೋಪಕಾರಿ, ಸತಿ ಪರಾರಿ' ಎಂಬ ಸಾಮಾಜಿಕ ನಾಟಕ ನೋಡಲು ಗಾಂಧಿಪುರದ ಜನ ತುದಿಗಾಲ ಮೇಲೆ ನಿಂತರು.

ಪೈಮಾಮನ ಮನೆಯ ವಿಶಾಲ ಹಜಾರದಲ್ಲೇ ನಡೆಯುತ್ತಿದ್ದ ತಾಲೀಮಿಗಾಗಿ ಬಂದ ನಟಿಯನ್ನು ಊರ ಜನ ಇಣುಇಣುಕಿ ನೋಡಿ ತೃಪ್ತಿಪಟ್ಟುಕೊಳ್ಳುತ್ತಿದ್ದರು. ಬೊಚ್ಚು ಬಾಯಗಲಿಸಿ ನೋಡುತ್ತ ಕೂತಿದ್ದ ಪಂಚಾಯಿತಿ ಅಧ್ಯಕ್ಷ ಪಟೇಲ್ ಈರಪ್ಪನವರು ತಾಲೀಮು ಮುಗಿಯುತ್ತಿದ್ದಂತೆ, "ಪೈಮಾಮ್, ಈ ಮಗೂವನ್ನ ನಾಟಕ ಮುಗಿಯೋವರೆಗೆ ನಮ್ಮನೆಲೇ ಇರೋ ಏರ್ಪಾಟು ಮಾಡ್ತೇನೆ" ಎಂದು ಹುರುಪಿನಿಂದ ಹೇಳಿದರು. "ಬೇಡ ಪಟೇಲರೇ, ಅವಳನ್ನ ಇಲ್ಲೇ ಇರೋದಕ್ಕೆ ಏರ್ಪಾಟು ಮಾಡಿಯಾಗಿದೆ" ಎಂದು ಪಟೇಲರ ಉಮೇದಿಗೆ ಪೈಮಾಮ್ ಭಂಗ ತಂದರು. ಅವರು ನಿರಾಸೆಯಿಂದ ಹೊರಟು ಹೋದ ಮೇಲೆ, "ಒಂದು ಸೊಳ್ಳೆಯನ್ನ ಹೊಡೆದರೂ ಅದರ ಕಾಲು ಅಗಲಿಸಿ, ಅದು ಹೆಣ್ಣಾ ಎಂದು ನೋಡೋ ಕಚ್ಚೆ ಹರುಕ ಈ ಪಟೇಲ. ಇಂಥವನ ಮನೆಗೆ ನಾನು ಆ ನಟಿಯನ್ನ ಕಳಿಸ್ತೇನಾ," ಎಂದು ಪಾತ್ರಧಾರಿ ಹುಡುಗರ ಬಳಿ ಪೈಮಾಮ್ ಗುಟ್ಟಾಗಿ ಹೇಳಿ ನಕ್ಕರು. ತಾಲೀಮು ಮುಗಿದು ತುಂಬಾ ಹೊತ್ತಾದರೂ, ಅದೂಇದೂ ನೆಪದಲ್ಲಿ ನಟಿಯ ಸುತ್ತವೇ ಸುಳಿದಾಡುತ್ತ ಮಾತಿನಲ್ಲೇ ಚಟ ತೀರಿಸಿಕೊಳ್ಳುತ್ತಿದ್ದ ಪಡ್ಡೆಗಳನ್ನುದ್ದೇಶಿಸಿ, "ಸಾಕು ಮನೆಗೆ ಹೋಗ್ರೋ ತಮ್ಮಾ. ಎಳೆ ಪೋರರು ನೀವು. ಎನರ್ಜಿ ವೇಸ್ಟ್ ಮಾಡಿಕೊಳ್ಳಬಾರದು. ಊಟ ಮಾಡಿ ಆರಾಮಾಗಿ ನಿದ್ದೆ ಮಾಡಿ ಆಯ್ತಾ" ಎಂದು ಮಾರ್ಮಿಕವಾಗಿ ಹೇಳಿ ಜಾಗ ಖಾಲಿ ಮಾಡಿಸಿದರು.

★★★

ಟೆಂಟ್‌ನೊಳಗೆ ಜನ ಕಿಕ್ಕಿರಿದು ಸೇರಿದ್ದರು. 'ಗಾಂಧಿಪುರದ ಇತಿಹಾಸದಲ್ಲೇ ಈ ಪಾಟಿ ಜನ